'ಕ್ಷಮಿಸಿ, ನೀವು ಶಾಕ್ಯಮುನಿಯ...'

'ಥತ್, ನಿಲ್ಲಿಸು! ಮತ್ತೆ ಮತ್ತೆ ಹಾಗೆಂದು ನನ್ನನ್ನು ಚುಚ್ಚಬೇಡ!... ನಾನು ಬಯಸಿ ಪಡೆದದ್ದಲ್ಲ ಈ ಅವತಾರದ ಪಟ್ಟ. ನಾನು ಮನುಷ್ಯ. ಬರಿಯ ಮನುಷ್ಯ. ಪ್ರೇಮ ನಿವೇದನೆಗಳನ್ನು ತುಂಬಿಕೊಂಡ ಮನುಷ್ಯ. ನಾನು ಬಲವಂತ ಮಾಡುವುದಿಲ್ಲ. ಆದರೆ ನನ್ನಲ್ಲಿ ಈ ಕ್ಷಣ ಧಗಧಗಿಸುತ್ತಿರುವ ಜ್ವಾಲೆಯನ್ನು ತಣಿಸಿಹೋಗು. ನಿನ್ನ ಕಾಲಿಗೆ ಬೀಳಲೂ ನಾನು ತಯಾರು... ದಮ್ಮಯ್ಯ.'

ತರುಣಿ ಅವನ ಕರುಣಾಜನಕ ಕೋರಿಕೆಗೆ ಕರಗಿದಳು. ಅವನ ಬಾಹುಗಳಲ್ಲಿ ಕರಗಿದಳು. ಅವನ ಕಾಮದಲ್ಲಿ ಉರಿದಳು. ಬಿಸಿಲಿಗೆ ನೀರಾಗುವ ಹಿಮದಂತೆ ಕರಗಿಹೋದಳು.

ಕಚಗುಳಿಗೆ ಇರುಳು ನಕ್ಕಿತು. ಬೆಳದಿಂಗಳು ಮುಲುಗುಟ್ಟಿತು. ಗಾಳಿ ಸೊಗದಲ್ಲಿ ನರಳಿತು. ಬಿಗಿದ ಎರಡು ಶರೀರಗಳ ಬೆವರು ಸಂಗಮಿಸಿತು. ಉನ್ಮಾದದ ಝರಿಯೊಂದು ಪ್ರವಹಿಸಿತು.

ಅವನು ಕವಿ. ದೇಹ, ಮನಸ್ಸುಗಳು ಉದ್ರೇಕ ಕಳೆದು ಹಗುರಾದ ಮೇಲೆ ಕವಿತೆ ಗೀಚಿದನು,

ವೀರ್ಯದ ಒಂದು ಹನಿಯನ್ನೂ ಕಳಕೊಳ್ಳದೆ
ನಲ್ಲೆಯ ಜತೆ ನಿದ್ರಿಸದೇ ಇರಲಾರೆ...

ನಿಜ, ಅವನಿಗೆ ಹೆಣ್ಣಿನ ಸಾಂಗತ್ಯ ಬೇಕಿತ್ತು. ಹಗಲು ಪ್ರಾರ್ಥನೆ, ಧ್ಯಾನ, ಪೂಜಾವಿಧಿಗಳನ್ನೆಲ್ಲ ಜರುಗಿಸಿ ರಾತ್ರಿ ಹೆಣ್ಣಿನ ಮಗ್ಗಲಿಗೆ ಜಾರುತ್ತಿದ್ದ. ಒಂದೇ ದಿನದಲ್ಲಿ ಅವನು ಎರಡು ಬದುಕನ್ನು ಬದುಕುತ್ತಿದ್ದ. ಹಗಲು ಸನ್ಯಾಸ, ರಾತ್ರಿ ಸುರತ.

ಹೀಗೆ ತೀವ್ರವಾಗಿ ಬದುಕಿದವನು ಟಿಬೆಟಿನ ಧರ್ಮಗುರು ಆರನೇ ದಲಾಯಿ ಲಾಮಾ ತ್ಸಂಗ್‌ಯಾಂಗ್ ಗ್ಯಾತ್ಸೊ. ಈ ಸನ್ಯಾಸಿಗೆ ಸಂಸಾರದ ಗೊಡವೆಯಿಲ್ಲ. ಅವನು ಪ್ರೇಮಿಸಿದ ಹೆಣ್ಣು ಅವನಿಗೆ ಮಡದಿಯಾಗಬೇಕಿಲ್ಲ. ಇಂತಹ ವಿಲಕ್ಷಣ 'ಅನುಕೂಲತೆ'ಯಲ್ಲಿ ಅವನ ಬದುಕಿಗೆ ಅನೇಕ ಹೆಣ್ಣುಗಳು ಬಂದು ಹೋದರು. ಕವಿತೆ ಮತ್ತು ಕಾಮವನ್ನು ಆಸ್ವಾದಿಸುತ್ತಿದ್ದ ಅವನು ಅಪರಾಧೀ ಭಾವವಿಲ್ಲದೆ, ವ್ರತಭಂಗದ ಕೀಳರಿಮೆಯಿಲ್ಲದೆ ಬದುಕಿದ. ಮುಖವಾಡಗಳಿಲ್ಲದೆ ಪ್ರೇಮಿಸುತ್ತ ಹೋದ. ಹಿಂಜರಿಕೆಯಿಲ್ಲದೆ ಕಟು ಟೀಕೆಗಳನ್ನೆದುರಿಸಿದ. ಒಂದೆಡೆ ಅವನು–

ಅವಳ ಹೃದಯವನ್ನು
ಒಗ್ಗಿಸಿಕೊಳ್ಳುವ ಕಸರತ್ತಿನಲ್ಲಿ
ನನ್ನ ಧರ್ಮವನ್ನೇ ಕಳೆದುಕೊಂಡೆ
ಮುಂಬರಿದಂತೆ
ಸುಳ್ಳು ಹೇಳಿಕೊಂಡು
ಅವಳ ಹೃದಯಕ್ಕಿರಿಯಲಾರೆ...

ಎಂದು ಬರೆಯುತ್ತಾನೆ. ತಾನು ಪುರುಷ ಎಂಬ ಅಹಂ ಅನ್ನು ಹೊದ್ದುಕೊಂಡು ತನ್ನೊಡನೆ ಮಲಗಿದ ಹೆಣ್ಣು ತನ್ನ ಸೇವೆಗೆ ಮುಡಿಪಾದವಳು ಎಂದವ ತೀರ್ಮಾನಿಸಲಾರ. ಅವಳ ಅನಿಸಿಕೆಗಳನ್ನು ಹಂಚಿಕೊಳ್ಳಬೇಕು. ತನ್ನೊಳಗಿನ ದ್ವಂದ್ವಗಳನ್ನು ಅವಳಲ್ಲಿ ತೋಡಿಕೊಳ್ಳಬೇಕು. ಗೊಂದಲಗಳು ತಿಳಿಯಾಗಬೇಕು. ಇವು ಅವನ ಇಚ್ಛೆ. ಅವಳು ಎದೆಗೊರಗಿ ಸಮಾಧಾನಿಸುವಾಗ ಭದ್ರತೆಯ ಭಾವ ಅವನನ್ನು ತುಂಬುತ್ತದೆ. ತಾನು ಯಾವ ಅನಿವಾರ್ಯತೆಗೆ ಬಂಧಿಸಲ್ಪಟ್ಟೆನೋ ಅದರ ಕೃತಕತೆಯಿಂದ ತುಸು ಕಾಲವಾದರೂ ಬಿಡುಗಡೆ ಸಿಗುತ್ತದೆ.

ತಾನು ವಂಚಿಸುತ್ತೇನೆಂಬ ಭಾವ ಪ್ರೇಮಿಯಲ್ಲಿ ಮೂಡದಂತೆ ತನ್ನನ್ನು ಪೂರ್ತಿಯಾಗಿ